

ಇಂಗಾಲ ಬಳಸಿ ತಮ್ಮ ಆಹಾರವನ್ನು ತಾವೇ ತಯಾರಿಸಿಕೊಳ್ಳಲು ದ್ಯುತಿ ಸಂಶ್ಲೇಷಣೆಗೆ ಬೇಕಾಗಿರುವುದು ನೀಲಿಯಿಂದ ಕೆಂಪು ತರಂಗಾಂತರದ, ನಮ್ಮ ಕಣ್ಣಿಗೆ ಕಾಣುವ, 400ರಿಂದ 700 ನ್ಯಾನೋ ಮೀಟರ್ ಆಚೆ ಈಚೆಯ ವೇವ್‌ಲೆಂಥ್‌ನ ಕಿರಣಗಳು. ಈ ಶ್ರೇಣಿಗೆ ವೈಜ್ಞಾನಿಕವಾಗಿ **Photosynthetically Active Radiation** ಎನ್ನಲಾಗುತ್ತದೆ. ಇದನ್ನು ಬೆಳಕಿನ ಗುಣಮಟ್ಟ ಎಂದು ಕರೆಯಲಾಗುತ್ತದೆ.

ಸ್ಥೂಲವಾಗಿ ಹೇಳಬೇಕಾದರೆ ಸಸ್ಯಗಳು ಇಡೀ ದಿನದ ಬೆಳಕು, ತಾಪಮಾನವನ್ನು ಸಂಗ್ರಹಿಸಿ ತಮ್ಮ ಬೆಳವಣಿಗೆಯನ್ನು ಸಂತಾನೋತ್ಪತ್ತಿ ಕಡೆಗೆ ನಿರ್ದೇಶಿಸುತ್ತವೆ. ಇದಕ್ಕೆ **'Photo Period'** ಎನ್ನಲಾಗುತ್ತದೆ. ಹಾಗಾಗಿ ಹೆಚ್ಚಾಗಿ ಹೂ ಬಿಡುವ, ಹಣ್ಣು ಕೊಡುವ ಸಸ್ಯಗಳಿಗೆ ಇಡೀ ದಿನದ ಬೆಳಕು ಬೇಕೇ ಬೇಕು. ಒಳಾಂಗಣದ ಬಣ್ಣದ ಎಲೆಯ 'ಫೋಲಿಯೆಜ್' ಸಸ್ಯಗಳು ತಮ್ಮೆಲ್ಲಾ ಶಕ್ತಿಯನ್ನು ಚಂದದ ಎಲೆಗಳ ಬೆಳವಣಿಗೆಗೇ ಬಳಸುವುದರಿಂದ ಬೆಳಕನ್ನು ಸಂಗ್ರಹಿಸುವ ಆದ್ಯತೆ ಕಡಿಮೆಯೆಂದೇ ಹೇಳಬಹುದು. ಆದ್ದರಿಂದ ಒಳಾಂಗಣ ಸಸ್ಯಗಳಿಗೆ ಮಂದ ಬೆಳಕು, ನೆರಳು, ದಿನದ ಕೆಲವೇ ಹೊತ್ತಿನ ಬೆಳಕು ಬೆಳವಣಿಗೆಗೆ ಸಾಕಾಗಬಹುದು.

ಭೂಮಿಯ ಚಲನೆಯ ಕಾರಣ ಸೂರ್ಯ ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗುತ್ತಾನೆಂದು ಭಾವಿಸಲಾಗಿದೆ. ಹಾಗಾಗಿ ಕೋಣೆಯೊಂದಲ್ಲಿ ಪೂರ್ವಕ್ಕೆ ಮುಖ ಮಾಡಿರುವ ಕಿಟಕಿಗಳಲ್ಲಿ ಬೆಳಗಿನ ಆಹ್ಲಾದಕರ ಬೆಳಕು, ಪಶ್ಚಿಮಕ್ಕೆ ಮುಖ ಮಾಡಿರುವ ಕಿಟಕಿಗಳಲ್ಲಿ ಮಧ್ಯಾಹ್ನದ ಬಿರುಸು ಬೆಳಕು ಬೀಳುತ್ತದೆ. ಉತ್ತರಕ್ಕೆ ಮುಖಮಾಡಿರುವ ಕಿಟಕಿಗಳಲ್ಲಿ ದಿನದ ಯಾವ ಹೊತ್ತಿನಲ್ಲೂ ನೇರ ಬೆಳಕು ಹಾಯದ ಕಾರಣ ತಂಪಾದ ನೆರಳಿನ ಜಾಗವಾಗಿರುತ್ತದೆ. ದಕ್ಷಿಣಕ್ಕೆ ಮುಖ ಮಾಡಿರುವ ಕಿಟಕಿಗಳಿರುವ ಕೋಣೆಯಲ್ಲಿ ಸುಮಾರಾಗಿ ದಿನವಿಡೀ ಬೆಳಕಿರುವುದನ್ನು ಗಮನಿಸಬಹುದು. ಜಾಗದಿಂದ ಜಾಗಕ್ಕೆ, ಕಾಲದಿಂದ ಕಾಲಕ್ಕೆ, ಬೆಳಕಿನ ಈ ಮಾರ್ಗ ಬದಲಾವಣೆಯನ್ನು ಲಕ್ಷಿಸಿ ಸಸ್ಯಗಳನ್ನಿಡಲು ಸರಿಯಾದ ಜಾಗವನ್ನು ನಾವೇ ತೀರ್ಮಾನಿಸಬೇಕು. ಬೆಳಕಿನ ಕೊರತೆಯಾದಾಗ ಪ್ರಕಾಶದ ದಿಕ್ಕಿನೆಡೆಗೆ ಸಸ್ಯಗಳು ಚಲಿಸುವುದನ್ನೂ **(Phototropism)** ಗಮನಿಸಬಹುದು.

ಹೀಗೆ ಬೆಳಕಿನ ತೀಕ್ಷ್ಣತೆ, ಅವಧಿ, ಪ್ರಕಾಶಮಾನ, ಗುಣಮಟ್ಟ, ದಿಕ್ಕು ಇವೆಲ್ಲವೂ ಒಳಾಂಗಣದ ಸಸ್ಯಗಳ ಆಯ್ಕೆಯಲ್ಲಿ, ಅವುಗಳನ್ನು ಯಾವ ಸ್ಥಳದಲ್ಲಿಡಬೇಕೆನ್ನುವುದನ್ನು ನಿರ್ಧರಿಸುತ್ತವೆ.

ಸಸ್ಯಗಳನ್ನಿರಿಸಲು ಕಿಟಕಿಗಳು ಪ್ರಶಸ್ತ ಸ್ಥಳ. ಉತ್ತರದ ಕಿಟಕಿಗಳ ಬಳಿ ನೆರಳು ಬಯಸುವ ಜರಿ ಗಿಡಗಳು, ಪೀಸ್ ಲಿಲಿಗಳು, ದಕ್ಷಿಣಕ್ಕೆ ಬೆಳಕನ್ನು ಬಯಸುವ ಕಳ್ಳಿ–ಸಕ್ಯುಲೆಂಟ್ಸ್, ಪೂರ್ವಕ್ಕೆ ಬೆಳಗಿನ ಬೆಳಕನ್ನು ಇಷ್ಟಪಡುವ ಪೈಲಿಯಾದಂತ ಗಿಡಗಳು ಮತ್ತು ಪಶ್ಚಿಮಕ್ಕೆ ಮಧ್ಯಾಹ್ನದ ಬಿರುಬಿಸಲನ್ನು ತಾಳಿಕೊಳ್ಳುವ ಫಿಟ್ಟೋನಿಯಾದಂಥ ಗಿಡಗಳನ್ನು ಇರಿಸಬಹುದು. ಬೆಳಕನ್ನು ಆಧರಿಸಿ ಕಿಟಕಿಗಳಷ್ಟೇ ಅಲ್ಲ, ಮೇಜು, ಕಪಾಟು, ಬುಕ್ ರ್‍ಯಾಕ್, ಅಡುಗೆ ಕೋಣೆ, ಸ್ನಾನಗೃಹ, ಮಲಗುವ ಕೋಣೆ ಹೀಗೆ ಎಲ್ಲಾ ಭಾಗದಲ್ಲೂ ಸಸ್ಯಗಳನ್ನು ಇಡಬಹುದು.

